# ಚರಿತ್ರಹೀನ ಸ್ವತಂತ್ರ ಭಾರತ

ಪರಕೀಯರ ಆಡಳಿತದಿಂದ ಭಾರತ ಬಿಡುಗಡೆ ಪಡೆದು ಆರೂವರೆ ದಶಕಗಳೇ ಆಗಿವೆ. ಈ ಬಿಡುಗಡೆ ಸುಲಭವಾಗಿ, ತನ್ನಷ್ಟಕ್ಕೆ ತಾನೇ ಬಂದುದಲ್ಲ ಎಂಬುದು ಎಲ್ಲರಿಗೂ ಗೊತ್ತಿರುವಂಥದು, ಅದೊಂದು ಸಮಷ್ಟಿ ಪ್ರಯತ್ನದ ಫಲ; ಗಾಂಧೀಜೀಯವರಂಥ ಹತ್ತಾರು ಸಮರ್ಥ ನಾಯಕರ ನೇತೃತ್ವದಲ್ಲಿ ಇಡಿಯ ಭಾರತ ಹಲವು ವರ್ಷಗಳ ಕಾಲ ಏಕವ್ಯಕ್ತಿಯಂತೆ ನಿಂತು ನಡೆಸಿದ ಹೋರಾಟದಿಂದ ಬಂದ 'ಗಳಿಕೆ.' ಈ ಹೋರಾಟದ ಉದ್ದಕ್ಕೂ ಬೆನ್ನ ಹಿಂದಿನ ಬೆಳಕಾಗಿದ್ದು, ಧೃತಿಗೆಡದೆ ಮುನ್ನಡೆಯುವ ಪ್ರೇರಣೆಯನ್ನು ಕೊಟ್ಟಿದ್ದು ಆ ಪೀಳಿಗೆಯ ಜನ ಜತನದಿಂದ ಕಾಪಾಡಿಕೊಂಡು ಬಂದಿದ್ದ ಮೌಲ್ಯಪ್ರಜ್ಞೆ, ಇದರಿಂದಾಗಿ ಸ್ವಾತಂತ್ರ್ಯ ಹೋರಾಟಕ್ಕೆ ಅತ್ಯಂತ ಅಗತ್ಯವಾಗಿದ್ದ ನೈತಿಕ ಸ್ಥೈರ್ಯ, ತ್ಯಾಗ ಮನೋಭಾವ, ಸರ್ವಹಿತ ಕಾಳಜಿ ಇಂಥ ಅನೇಕ ಮೌಲಿಕ ಗುಣಗಳು ನಿರಂತರವಾಗಿ ಒದಗಿ ಬಂದುದರಿಂದ ಬ್ರಿಟಿಷರು ಭಾರತೀಯರಿಗೆ ಮಣಿಯುವಂತಾಯಿತು. ಹೀಗೆ ಸ್ವಾತಂತ್ರ್ಯ ಹೋರಾಟದ ಕಾಲಘಟ್ಟವೆಂಬುದು ಭಾರತದ ಇತಿಹಾಸದಲ್ಲಿ ಎಲ್ಲ ದೃಷ್ಟಿಯಿಂದಲೂ ತೇಜೋನ್ವಿತ ಕಾಲವಾಗಿತ್ತೆಂದರೆ ತಪ್ಪಲ್ಲ.

ಈಗ ನಾವು ವರ್ಷ ವರ್ಷವೂ ಸ್ವಾತಂತ್ರ್ಯ ದಿನವನ್ನು ಯಾಂತ್ರಿಕವಾಗಿ ಆಚರಿಸುತ್ತೇವೆ. ಸ್ವಾತಂತ್ರ್ಯದ ಕೀರ್ತನೆ, ಅದಕ್ಕಾಗಿ ನಡೆದ ಹೋರಾಟದ ನೆನಪು– ಇತ್ಯಾದಿಗಳ ಪುನರುಕ್ತಿಯೊಂದಿಗೆ ರಾಜಕೀಯ ಪುಡಾರಿಗಳ ಬೂಟಾಟಿಕೆಯ ಮಾತುಗಳು ವೇದಿಕೆಗಳಲ್ಲಿ ವಿಜೃಂಭಿಸುತ್ತವೆ. ಹೊಸ ಪೀಳಿಗೆಗೆ ಒಂದಿಷ್ಟು ಉಪದೇಶದ ಮಾತುಗಳೂ ಸೇರಿಕೊಳ್ಳುತ್ತವೆ. ಆದರೆ ಸಾತಂತ್ರ್ಯವನ್ನು ಪಡೆದ ನಂತರ ನಮ್ಮ ಸಾಧನೆ ಏನು, ಈಗ ನಾವು ಯಾವ ದಿಕ್ಕಿನಲ್ಲಿ ಚಲಿಸುತ್ತಿದ್ದೇವೆ– ಎಂದೆಲ್ಲ ಆತ್ಮಾವಲೋಕನ ಮಾಡಿಕೊಳ್ಳುವ, ಆ ನಿಟ್ಟಿನಲ್ಲಿ ನಮ್ಮನ್ನ ನಾವು ತಡವಿ, ಕೊಡವಿಕೊಳ್ಳುವ ಕೆಲಸ ನಾವು ಮಾಡುತ್ತಿದ್ದೇವೆಯೆ– ಎಂಬ ಪ್ರಶ್ನೆಗೆ ಉತ್ತರವಿಲ್ಲ. ಸ್ವಾತಂತ್ರ್ಯ ಬಂದನಂತರ ನಾವು ಕೈಗಾರಿಕೆ, ವಾಣಿಜ್ಯ, ಶೈಕ್ಷಣಿಕ, ತಾಂತ್ರಿಕ, ಆರ್ಥಿಕ– ಇಂಥ ಹಲವಾರು ಕ್ಷೇತ್ರಗಳಲ್ಲಿ ಸ್ವಲ್ಪ ಮಟ್ಟಿಗೆ ಪ್ರಗತಿ ಸಾಧಿಸಿದ್ದೇವೆ, ನಿಜ. ಆದರೆ ಸ್ವಾತಂತ್ರ್ಯ ಪೂರ್ವದಲ್ಲಿದ್ದ ಮೌಲ್ಯಪ್ರಜ್ಞೆ ಮಾತ್ರ ನಮ್ಮಿಂದ ಬಹುಪಾಲು ಮರೆಯಾಗಿದೆ, ಸ್ವಾತಂತ್ರ್ಯ ಸಮರದ ಕಾಲದಲ್ಲಿ ಭಾರತೀಯರಲ್ಲಿ ದೇಶಕ್ಕಾಗಿ ಸರ್ವಸ್ವವನ್ನೂ ತ್ಯಾಗ ಮಾಡುವುದು ಪರಮೋಚ್ಚ ಕಾರ್ಯವೆಂಬ ಆದರ್ಶವಿತ್ತು; ಸ್ವತಂತ್ರರಾದ ಮೇಲೆ ದೇಶವನ್ನು ಸರ್ವಾಂಗ ಸುಂದರವಾಗಿ ಕಟ್ಟಬೇಕೆಂಬ ಕನಸಿತ್ತು. 'ಇರುವುದೆಲ್ಲವನು ಎಲ್ಲ ಜನಕೆ ತೆರವಾಗಿಸುವ, ಸಮ ಬಗೆಯ, ಸಮ ಸುಖದ, ಸಮ ದುಃಖದ, ಸಾಮರಸ್ಯದ ಸಾಮಗಾನ ಲಹರಿಯ ಮೇಲೆ ತೇಲಿ ಬರಲಿದೆ ನೋಡು ನಮ್ಮನಾಡು' (ಅಡಿಗ) ಎಂಬಂಥ ಉಜ್ವಲ ಪ್ರತೀಕ್ಷೆಯಿತ್ತು. ಆದರೆ ಈಗ? ಸ್ವಾತಂತ್ರ್ಯ ಪೂರ್ವದಲ್ಲಿದ್ದ ಆದರ್ಶನಿಷ್ಠೆ, ತ್ಯಾಗ ಮನೋಧರ್ಮ, ನೈತಿಕ ಎಚ್ಚರ– ಮುಂತಾದವುಗಳ ಸ್ಥಾನವನ್ನು ಸ್ವಾರ್ಥ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ– ಇಂಥವೆಲ್ಲಾ ಆಕ್ರಮಿಸಿಕೊಂಡಿವೆ, ನಾವು ನೈತಿಕವಾಗಿ ಪ್ರಪಾತಕ್ಕೆ ಕುಸಿಯುತ್ತಿದ್ದೇವೆ. ಪ್ರಜಾಪ್ರಭುತ್ವದ ಹೆಸರಿನಲ್ಲಿ ಅಧಿಕಾರಕ್ಕೆ ಬಂದು, ಜನತೆಯ ರಕ್ತ ಹೀರಿ, ಏನೆಲ್ಲವನ್ನೂ ಕಬಳಿಸುತ್ತಾ 'ಗುಂಡೋದರ'ರಾಗುತ್ತಿರುವ ಮುಖಂಡರು ಎಲ್ಲ ಕಡೆಯಲ್ಲೂ ವಿಜೃಂಭಿಸುವಂತಾಗಿದೆ.

ಚರಿತ್ರಹೀನ ಸ್ವತಂತ್ರ ಭಾರತದ ಸ್ಥಿತಿಯನ್ನು ಕುರಿತು, ತಮ್ಮದೊಂದು ಕವಿತೆಯಲ್ಲಿ ಕವಿ ಗೋಪಾಲಕೃಷ್ಣ ಅಡಿಗರು ಒಂದು ಜಾತ್ರೆಯ ರೂಪಕವನ್ನು ಬಳಸಿ, ವಿವರವಾಗಿ ವರ್ಣಿಸಿದ್ದಾರೆ. ಅವರೆನ್ನುತ್ತಾರೆ: 'ಇಂದು ನಮ್ಮೀನಾಡು ಜಾತ್ರೆ ಗಜಿಬಿಜಿ ಕಳೆದು ಪಡಖಾನೆಯಲಿ ಬಿದ್ದ ಜನದ ಪಾಡು! ಬುಂಡೆ ತುಂಬಿದೆ ಹೆಂಡ, ಕೆಸರು ತುಂಬಿದೆ ಹೊಂಡ, ಕಂದಿ ಕರಕಿದೆ ಉರಿದ ಕೆಂಪು ಕೆಂಡ.' ಊರಲ್ಲಿ ಜಾತ್ರೆ ನಡೆದಿರುವಾಗ ಜನರಲ್ಲಿ ಭಕ್ತಿ, ಶ್ರದ್ಧೆ, ಉತ್ಸಾಹಗಳು ಕಾಣಿಸಿಕೊಳ್ಳುತ್ತವೆ. ಜಾತ್ರೆ ಮುಗಿದೊಡನೇ ಅವೆಲ್ಲವೂ ಮಾಯವಾಗಿ, ತೀವ್ರ ಭೋಗಾಸಕ್ತಿ ಕೆರಳುತ್ತದೆ. ಜನಕ್ಕೆ ದೇವಾಲಯದ ಬದಲು ಪಡಖಾನೆಯೇ ಗಮ್ಯ ಸ್ಥಾನವಾಗುತ್ತದೆ. ಅವರಲ್ಲಿದ್ದ ಸಾತ್ವಿಕಗುಣ ಮರೆಯಾಗಿ, ರಾಕ್ಷಸೀ ಪ್ರವೃತ್ತಿ ಎಚ್ಚತ್ತುಕೊಳ್ಳುತ್ತದೆ. ಸ್ವಾತಂತ್ರ್ಯ ಹೋರಾಟ ಮುಗಿದು, ದೇಶ ಸ್ವತಂತ್ರವಾದ ಈ ದಶಕಗಳಲ್ಲಿ ನಮ್ಮ ದೇಶದ ಸ್ಥಿತಿ ಆಗಿರುವುದೂ ಹೀಗೆಯೇ, ಗೋಮುಖ ವ್ಯಾಘ್ರಗಳಂತಿರುವ ಜನನಾಯಕರ ಸಂಖ್ಯೆ ನಿರಂತರವಾಗಿ ಬೆಳೆಯಲು ಪ್ರಸ್ತುತ ಭಾರತ ಅತ್ಯಂತ ಫಲವತ್ತಾಗಿರುವ ಕ್ಷೇತ್ರವಾಗುತ್ತಿದೆ!

■ **ವೈನತೇಯ**

## ಮಾತೇ ಮುತ್ತು

★ ಸಂವಿಧಾನದಿಂದ ರಾಜಕೀಯ ಸಮಾನತೆ ಬಂದಿದೆ. ಆದರೆ ಸಾಮಾಜಿಕ, ಆರ್ಥಿಕ ಸಮಾನತೆ ಬರುವವರೆಗೂ ಇದು ಹುಸಿ ಸಮಾನತೆ.

–ಬಿ.ಆರ್.ಅಂಬೇಡ್ಕರ್

★ ಧರ್ಮ ಮಾರ್ಗದಲ್ಲಿ ನಡೆಯುವವನ ಕಷ್ಟ ಮತ್ತು ಅಧರ್ಮೀಯನ ಸಂತೋಷ ಎರಡೂ ಅಲ್ಪಾಯುಷಿಗಳೇ. ಕೊನೆಗೆ ಗೆಲ್ಲುವುದು ಧರ್ಮವೇ.

–ಧರ್ಮರಾಯ

★ ಯಾರಲ್ಲಿ ವಿದ್ಯೆಯಾಗಲಿ, ತಪಸ್ಸಾಗಲಿ, ದಾನವಾಗಲಿ, ಜ್ಞಾನವಾಗಲಿ, ಶೀಲವಾಗಲಿ, ಗುಣವಾಗಲಿ, ಧರ್ಮವಾಗಲಿ ಇಲ್ಲವೋ ಅವರು ಈ ಮನುಷ್ಯ ಲೋಕದಲ್ಲಿ ಭೂಮಿಗೆ ಭಾರವಾಗಿ ಮನುಷ್ಯ ರೂಪದಿಂದ ಸಂಚರಿಸುವ ಮೃಗಗಳು ಮಾತ್ರ.

–ನೀತಿ ಶತಕ

★ ಭಕ್ತಿ, ಒಳ್ಳೆಯ ಮಾತುಗಳನ್ನಾಡಿಸಿದರೆ ಸಾಲದು; ಅದು ಒಳ್ಳೆಯ ಕೆಲಸಗಳನ್ನು ಮಾಡಿಸಬೇಕು. ಮತ್ತು ಆ ಕೆಲಸಗಳ ಒಳ್ಳೆಯತನ ಲೋಕದ ಜೀವನಕ್ಕೆ ಉಪಯೋಗವಾಗಬೇಕು.

–ಡಿ.ವಿ.ಗುಂಡಪ್ಪ

★ ಬಿಲ್ಲಿನಿಂದ ಹಾರಿದ ಬಾಣ ಮತ್ತೆ ಹಿಂದಕ್ಕೆ ಬರುವುದಿಲ್ಲ.

–ಇರಾನ್ ಗಾದೆ

★ ದೊಡ್ಡ ಮನುಷ್ಯನಂತೆ ಆಡಬೇಡ, ನೀನು ಅಷ್ಟು ಸಣ್ಣ ಮನುಷ್ಯನಲ್ಲ.

–ಜ್ಯೂಯಿಷ್ ಗಾದೆ

★ ನಾನು ಬುದ್ಧಿವಂತನಲ್ಲ– ಎಂದುಕೊಂಡವನು ಬುದ್ಧಿವಂತನಾಗಬಲ್ಲ.

–ಪಿ.ಸೈರಸ್

★ ವ್ಯವಸ್ಥೆ ಕುರಿತು ಇಂದು ಎಲ್ಲರಿಗೂ ವಿಶ್ವಾಸ ಹೋಗಿದೆ. ಆದರೆ ವ್ಯವಸ್ಥೆ ಬಿಟ್ಟು ಹೋರಾಟ ಮಾಡಲಾಗುವುದಿಲ್ಲ. ಇಲ್ಲಿನ ಜನರನ್ನು ಬಿಟ್ಟು ಇಂದ್ರಲೋಕ, ಚಂದ್ರಲೋಕದಿಂದ ಜನರನ್ನು ತಂದು ಚಳವಳಿ ನಡೆಸಲು ಸಾಧ್ಯವಿಲ್ಲ.

–ಎಸ್.ಆರ್.ಹಿರೇಮಠ

★ ಭಯಕ್ಕೆ ಉತ್ತಮ ಔಷಧಿ 'ಜ್ಞಾನ.'

–ಎಮರ್‌ಸನ್

★ ಜ್ಞಾನ ಎಂದರೆ ಅಕ್ಷರ ಮಾತ್ರವಲ್ಲ, ಅಕ್ಷರ ಕಲಿತ ಮಾತ್ರಕ್ಕೆ ಜ್ಞಾನಿಗಳಾಗುವುದಿಲ್ಲ. ತಾನು ಮಾಡುವ ಕೃಷಿ, ಕರಕುಶಲತೆ, ಪಶುಸಂಗೋಪನೆ ಮುಂತಾದ ಎಲ್ಲ ಕಾರ್ಯಗಳಲ್ಲಿ ವ್ಯಕ್ತಿಗೆ ಇರುವ ತಿಳಿವಳಿಕೆಯೇ ಜ್ಞಾನ. ಅವನ್ನು ಸರಿಯಾಗಿ ಬಳಸುವ ಕ್ರಮ ಮತ್ತು ಬದ್ಧತೆಯೇ ಜ್ಞಾನ.

–ಅನುಭವಾಮೃತ

★ ಸುಲಭವಾಗಿ ಭರವಸೆ ಕೊಡುವವನು ಅದಕ್ಕೆ ನಿಷ್ಠನಾಗಿರಲಾರ.

–ಲೋಟ್ಜು

★ ದುಃಖಿಗಳಿಗಿರುವ ಏಕಮಾತ್ರ ಪರಿಹಾರ 'ಭರವಸೆ'ಯೇ.

–ಶೇಕ್ಸ್‌ಪಿಯರ್

★ ಭರವಸೆ ಇಲ್ಲದ ಭಯ ಇಲ್ಲ; ಭಯವಿಲ್ಲದ ಭರವಸೆ ಇಲ್ಲ.

–ಸ್ಪಿನೋಜಾ

★ ಸಣ್ಣ ಕಾಣಿಕೆ ಕೊಡುವುದನ್ನು ತಪ್ಪಿಸಿಕೊಳ್ಳಲು ಭಾರಿ ಭರವಸೆಗಳನ್ನು ಕೊಡುತ್ತೇವೆ.

–ಫ್ರೆಂಚ್ ಗಾದೆ